# ಸಂದರ್ಶನ: ಚಿಂತನೆಗಳ ದರ್ಶನ



ವರ್ತಮಾನದ ಸಾಂಸ್ಕೃತಿಕ ವ್ಯಕ್ತಿಗಳ ಸಂದರ್ಶನಗಳನ್ನು ಪ್ರಮುಖವಾಗಿ 'ಮಯೂರ' ಪ್ರಕಟಿಸುತ್ತ ಬಂದಿರುವುದನ್ನು ವಾಚಕರು ಗಮನಿಸಿರಬಹುದು. ಸಾಹಿತ್ಯ, ಸಂಗೀತ, ಸಿನಿಮಾ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತರು ಇಲ್ಲಿ ದಾಖಲಾಗುತ್ತ ಬಂದಿದ್ದಾರೆ. ಅಪರೂಪದ ಒಳನೋಟಗಳಿಂದ, ಕಾಣ್ಕೆಗಳಿಂದ ಕೂಡಿದ ಈ ಮಾತುಕತೆಗಳಿಂದ ಓದುಗರು ಆನಂದಗೊಂಡಿರಬಹುದು. ಅವು ವ್ಯಕ್ತಿಗಳ ಚಿಂತನೆಗಳ ಪ್ರಕಟಣೆಯಾಗಿರುವಂತೆ ಒಂದು ಕಾಲಮಾನದ ಸಾಂಸ್ಕೃತಿಕ ದಾಖಲೆಗಳೂ ಸಹ. ಸಂದರ್ಶನ ಇಬ್ಬರ ನಡುವೆ ನಡೆದ ವೈಯಕ್ತಿಕ ಸಂವಾದವಾದರೂ ಅದು ಪ್ರಕಟವಾಗುತ್ತಿದ್ದಂತೆ ಸಾರ್ವಜನಿಕವಾಗುತ್ತದೆ. ಅನೇಕ ಓದುಗರ ಮೊದಲ ಆಯ್ಕೆ ಚುರುಕಿನ, ಚೂಪಾದ, ತೀಕ್ಷ್ಣ ಸ್ವರೂಪಿ ಮಾತುಕತೆಗಳಾಗಿರುತ್ತವೆ. ಎಲ್ಲರಿಗೂ ಮಾತು, ಮಾತಿನಿಂದ ಹೊಮ್ಮುವ ಮಿಂಚು, ಗುಡುಗು, ಸಿಡಿಲು, ಮಳೆಯ ಸಿಂಚನ ಬೇಕು. ವ್ಯಕ್ತಿಗಳ ಲೋಕಾನುಭವ, ಜೀವನ ದೃಷ್ಟಿ ಪ್ರಕಟವಾಗುವ ಸನಿಹದ ಮಾರ್ಗ ಕೂಡ ಇದು. ಹಾಗಾಗಿ ಮಾತುಕತೆಗಳು ಓದುಗರನ್ನು ಬಹುಬೇಗ ತಮ್ಮತ್ತ ಸೆಳೆದುಕೊಳ್ಳುತ್ತವೆ. ಹಾಗೆ ಸೆಳೆದುಕೊಳ್ಳಲು ಅವುಗಳ ಆ ಕ್ಷಣಕ್ಕೆ ಸ್ಪಂದಿಸುವ ಚಲನಶೀಲ, ಅನಿರೀಕ್ಷಿತ ಗುಣದ ಜೊತೆಗೆ ತುರ್ತಾಗಿ ತಾಕಬೇಕೆನ್ನುವ ತವಕವೂ ಕಾರಣವಿರಬಹುದು.

ಇಂತಹ ಮಾತುಕತೆಗಳು ಮದುವೆಯ ಕರೆಯೋಲೆ ಇದ್ದಂತೆ. ಆಮಂತ್ರಣ ಪತ್ರಿಕೆಯೇ ಮದುವೆ ಅಲ್ಲ. ಹಾಗಾಗಿ ಪತ್ರಿಕೆಗಳ ಸಂದರ್ಶನಗಳು ವ್ಯಕ್ತಿಯ ಒಟ್ಟೂ ಸಾಧನೆ, ಚಿಂತನೆ, ವ್ಯಕ್ತಿತ್ವಗಳ ಕಡೆ ಬೆರಳು ತೋರುತ್ತವೆ. ಸಂದರ್ಶಿತರು ಪ್ರತಿಭಾವಂತರೋ, ಚುರುಕಿನ ಮಾತಿನವರೋ ಇದ್ದರೆ ಸಾಲದು. ಸಂದರ್ಶಕರೂ ಅಷ್ಟೇ ಉತ್ತಮ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ; ಎದುರಿಗಿದ್ದ ವ್ಯಕ್ತಿಯನ್ನು ಮಾತನಾಡುವಂತೆ ಮನವೊಲಿಸಬೇಕಾಗುತ್ತದೆ, ಪ್ರಚೋದಿಸಬೇಕಾಗುತ್ತದೆ. ಅವರ ಯೋಚನಾ ಲಹರಿಯನ್ನು ಅರಿತು ತಮ್ಮ ದಾರಿಗೆ ತಂದುಕೊಳ್ಳಬೇಕಾಗುತ್ತದೆ. ಇಲ್ಲಿ ಸಿದ್ಧತೆ ಸಂದರ್ಶಕರಿಗೇ ಹೆಚ್ಚು ಬೇಕು. ಉತ್ತಮ, ಕೆಣಕುವಂತಹ ಪ್ರಶ್ನೆಗಳಿದ್ದರೆ ಮಾತುಕತೆಗೆ ಹೆಚ್ಚಿನ ರಂಗು ಬರುತ್ತದೆ. ಇದೊಂದು ಮನಸ್ಸಿನ ಆಟವಾದ್ದರಿಂದ ಎರಡೂ ಕಡೆಯವರು ಗಟ್ಟಿಗರಾಗಿದ್ದರೆ ಪ್ರದರ್ಶನಕ್ಕೆ ಕಳೆ. ಅಂತಹ ಆಟ ಯಾವತ್ತೂ ವಿಫಲವಾಗುವುದು ಸಾಧ್ಯವಿಲ್ಲ. ಕನ್ನಡದಲ್ಲಿ ಇದು ಮತ್ತಷ್ಟು ಬೆಳೆಯಬೇಕಿರುವ, ಕೆಲಸ ಮಾಡಲು ಮುಕ್ತ ಅವಕಾಶಗಳಿರುವ ಸಾಹಿತ್ಯ ಪ್ರಕಾರ.

ಈ ಸಂಚಿಕೆಯಲ್ಲಿ ಎರಡು ಸಂದರ್ಶನಗಳಿವೆ. ಒಂದು ವಿಮರ್ಶಕ ಜಿ. ರಾಜಶೇಖರ ಅವರದ್ದಾದರೆ, ಇನ್ನೊಂದು ಇಂಗ್ಲಿಷ್‌ನಲ್ಲಿ ಬರೆಯುವ ಭಾರತೀಯ ಜನಪ್ರಿಯ ಕಾದಂಬರಿಕಾರ ಅಮಿಶ್ ತ್ರಿಪಾಠಿ ಅವರದು. ಸಾಹಿತ್ಯದ ಕಸುಬಿನ ದೃಷ್ಟಿಯಿಂದ ಇಬ್ಬರದೂ ಭಿನ್ನ ಧ್ರುವ. ರಾಜಶೇಖರ್ ಸಾಹಿತ್ಯದ ನಿಷ್ಠುರ ನಿಲುವಿನ ವಿಮರ್ಶಕರು; ಅಮಿಶ್ ಪೌರಾಣಿಕ, ಮಹಾಕಾವ್ಯ ಆಧಾರಿತ ಕಾದಂಬರಿಗಳನ್ನು ಬರೆಯುವವರು. ಇವರಿಬ್ಬರ ಮಾತುಗಳನ್ನು ಓದಿದ ಬಳಿಕ ಯೋಚನೆಗಳ ಆಳ ಅಗಲ ಮಾತ್ರವಲ್ಲ ಮಹತ್ವ ಕೂಡ ಗೊತ್ತಾಗಬಹುದು. ಈ ವಿಶಿಷ್ಟ ಮಾತುಕತೆಗಳು ಈ ಬಾರಿಯ ವಿಶೇಷ.

**ಸಂದೀಪ ನಾಯಕ**